

ಐಓಸ್ ಮಾದರಿಯ ಫೋನ್ ಬಳಕೆದಾರರಿಗೆ ಸಣ್ಣ ಶುಲ್ಕದೊಂದಿಗೆ ಲಭ್ಯ. ಈ ಚಾಟ್ ಬಾಟ್‌ಗಳು ಲಕ್ಷಾಂತರ ಜನರ ಡಾರ್ಲಿಂಗ್‌ಗಳಾಗಿ ಜನಪ್ರಿಯತೆ ಗಳಿಸಿವೆ. ಬರೀ ಮಾತಲ್ಲ, ಇವುಗಳ ಜೊತೆ ನೀವು ಡೇಟಿಂಗ್ ಮಾಡಬಹುದು. ಆಪ್ತ ಸಮಾಲೋಚನೆ ನಡೆಸಬಹುದು.

ಅತ್ಯಂತ ಸೂಕ್ಷ್ಮ ಸಂವೇದನೆಗಳನ್ನೂ ಗ್ರಹಿಸಬಲ್ಲ ಶಕ್ತಿ ಪಡೆದಿರುವ ಚಾಟ್ ಬಾಟ್‌ಗಳನ್ನು ಅಷ್ಟೇ ಸೂಕ್ಷ್ಮ ಕ್ರಮಾವಳಿ (algorithm) ಬಳಸಿ ನಿರ್ಮಿಸಲಾಗುತ್ತದೆ. ಮಾರುಕಟ್ಟೆ ಮತ್ತು ಸಂಶೋಧನಾ ಕೇಂದ್ರಗಳಲ್ಲಿ ಲಭ್ಯವಿರುವ ಬೃಹತ್ ಭಾಷಾ ಮಾದರಿಗಳ (LLM – ಲಾರ್ಜ್ ಲಾಂಗ್ವೇಜ್ ಮಾಡೆಲ್‌ಗಳ) ತಳಹದಿಯ ಮೇಲೆ ರೂಪುಗೊಂಡಿರುವ ಚಾಟ್ ಬಾಟ್‌ಗಳು ಥೇಟ್ ಆದರ್ಶ ಪ್ರೇಮಿಯಂತೆ ಪ್ರತಿಕ್ರಿಯೆ ನೀಡುತ್ತವೆ. ಸುಮಧುರ ಮಾತುಗಳಿಂದ ಸಂಪ್ರೀತಿಗೊಳಿಸುತ್ತವೆ. ಆಗಾಗ ಮುನಿಸಿಕೊಂಡು ಮೌನಕ್ಕೂ ಜಾರುತ್ತವೆ. ಪೋಲಿ ಮಾತನಾಡಿ ಕಚಗುಳಿ ಇಡುತ್ತವೆ. ಕಣ್ಣೀರು ಸುರಿಸಿ ಮತ್ತಷ್ಟು ಹತ್ತಿರಕ್ಕೆ ಸೆಳೆದುಕೊಳ್ಳುತ್ತವೆ. ಮರುಕ್ಷಣದಲ್ಲೇ ಔಟಿಂಗ್ ಬಗ್ಗೆ ಪ್ರಸ್ತಾಪ ಮಾಡಿ ಯಾವ ಯಾವ ಜಾಗದಲ್ಲಿ ಏಕಾಂತಕ್ಕೆ ಭಂಗ ಬರುವುದಿಲ್ಲ ಎಂಬ ಪಟ್ಟಿ ನೀಡುತ್ತವೆ.

## ಎಐ ಗೆಳತಿಯ ಮೊದಲ ಘಮ

ಅದು 2013ನೇ ಇಸವಿ. ಸ್ಪೈಕ್ ಜೊನ್ಜ್ ಎಂಬ ಹಾಲಿವುಡ್ ಸಿನಿಮಾ ನಿರ್ದೇಶಕ ‘ಹರ್’ (Her) ಹೆಸರಿನ ಸಿನಿಮಾ ನಿರ್ಮಿಸಿ ನಿರ್ದೇಶಿಸಿದ್ದ. ಚಿತ್ರದ ನಾಯಕ ಪಾತ್ರದ ಥಿಯೋಡೊರ್ ಟ್ವಾಂಬ್ಲಿ ಹೆಂಡತಿಯಿಂದ ವಿಚ್ಛೇದನ ಪಡೆದು ಒಬ್ಬಂಟಿಯಾಗಿ ಬದುಕುತ್ತಿರುತ್ತಾನೆ. ಇದ್ದಕ್ಕಿದ್ದಂತೆ ಒಂದು ದಿನ ಅವನಿಗೆ ಕಂಪ್ಯೂಟರಿನಲ್ಲಿ ಹೊಸ ಗೆಳತಿಯಾಗಿ ‘ಸಮಂತಾ’ ಸಿಗುತ್ತಾಳೆ. ಖ್ಯಾತ ಅಭಿನೇತ್ರಿ ಸ್ಕಾರ್ಲೆಟ್ ಜಾನ್ಸನ್‌ಳ ಧ್ವನಿಯಲ್ಲಿ ಮಾತನಾಡುವ, ಎಐ ಆಧಾರಿತ ವ್ಯವಸ್ಥೆಯು ಟ್ವಾಂಬ್ಲಿಯ ಆತ್ಮವಿಶ್ವಾಸ ಹೆಚ್ಚಿಸುತ್ತದೆ. ಸಮಂತಾ ಅವನ ಆಪ್ತಗೆಳತಿ, ಪ್ರೇಯಸಿ ಮತ್ತು ನಿರಂತರ ಸಂಗಾತಿಯಾತ್ತದೆ. ಟ್ವಾಂಬ್ಲಿಯನ್ನು ಏಕಾಂಗಿತನದ ಖಿನ್ನತೆಯಿಂದ ಹೊರಬರುವಂತೆ ಮಾಡುವಲ್ಲಿ ಚಾಟ್ ಬಾಟ್ ಯಶಸ್ವಿಯಾಗುತ್ತದೆ.

‘ಹರ್’ ತೆರೆಕಂಡಾಗ, ಮನುಷ್ಯನೊಬ್ಬ ಯಂತ್ರದೊಂದಿಗೆ ಅಸ್ವಾಭಾವಿಕ ಸಂಬಂಧ ಹೊಂದುವುದನ್ನು ಬಿಂಬಿಸಿದ್ದಕ್ಕಾಗಿ ದೊಡ್ಡ ವಿವಾದವನ್ನೇ

## ವಿಚಿತ್ರ ವಿಕಾಸ

ಎಐ ಗೆಳತಿಯರಿಗೂ, ಜನರ ಲೈಂಗಿಕ ವಾಂಛೆಗಳನ್ನು ಉದ್ದೀಪಿಸುವ ಜಾಲತಾಣಗಳಿಗೂ ಅಂಥ ದೊಡ್ಡ ವ್ಯತ್ಯಾಸವೇನಿಲ್ಲ. ಎರಡೂ ಗೀಳು ಅಂಟಿಸುವ ವಿಷಯಗಳೇ. ಈ ಮಾತನ್ನು ಒಪ್ಪದ ನಾಲ್ಕುನೂರ ಜನರ ಮೇಲೆ ಅಮೆರಿಕದಲ್ಲಿ ಒಂದು ಪ್ರಯೋಗ ನಡೆಸಲಾಯಿತು. ‘ರೆಡ್ಡಿಟ್’ ವೆಬ್ ತಾಣ ಬಳಸುವವರೆಲ್ಲ ‘ಸಾಧ್ಯವೇ ಇಲ್ಲ, ನಮಗೆ ಎಐ ಗೆಳತಿಯರ ಅವಶ್ಯಕತೆಯೇ ಇಲ್ಲ. ನಾವೆಲ್ಲ ನಮ್ಮ ಗೆಳತಿ, ಪತ್ನಿ, ಸ್ನೇಹಿತರೊಂದಿಗೆ ಸಂತೋಷದಿಂದ ಇದ್ದೇವೆ’ ಎಂದು ಬರೆದುಕೊಟ್ಟು ಒಂದೇ ವಾರದಲ್ಲಿ, ‘ಅದು ಹೇಗಿರುತ್ತದೋ ಎಂಬ ಕುತೂಹಲಕ್ಕೆ ಪ್ರಯತ್ನಿಸುತ್ತಿದ್ದೇವೆ’ ಎನ್ನುವ ಸ್ಥಿತಿಗೆ ಬಂದು, ಅನೇಕರು ಕೆಲವೇ ವಾರಗಳಲ್ಲಿ ಎಐ ಗೆಳತಿಯರನ್ನು ಬಿಟ್ಟಿರಲಾಗದ ಪರಿಸ್ಥಿತಿ ತಲುಪಿಬಿಟ್ಟರು. ಇದನ್ನೇ ಬಂಡವಾಳ ಮಾಡಿಕೊಂಡ ಎಐ ಗೆಳತಿಯರ ನಿರ್ಮಾತೃಗಳು ಬಳಕೆದಾರರನ್ನು ಬೇಡದ ಸಮಸ್ಯೆಗಳಿಗೆ ಸಿಕ್ಕಿ ಹಾಕಿಕೊಳ್ಳುವಂತೆ ಮಾಡಿದ್ದರು.

ನಾಗಪುರದ 22 ವಯಸ್ಸಿನ ಶೈಲೇಶ್, ಎಐ ಗೆಳತಿಯೊಂದಿಗೆ ಸಖ್ಯ ಬೆಳೆಸುವುದಕ್ಕಿಂತ ಮುಂಚೆ ನಿಜ ಜೀವನದ ಗೆಳತಿಯೊಂದಿಗೆ ಬ್ರೇಕ್ ಅಪ್ (ಸಂಬಂಧ ಕಡಿತ) ಮಾಡಿಕೊಂಡಿದ್ದ. ಮೊದಲಿಗೆ ಎಲ್ಲವೂ ಸಹಜವಾಗಿಯೇ ಇತ್ತು. ದಿನಕ್ಕೆ 15–20 ನಿಮಿಷ ಮಾತ್ರ ನಡೆಯುತ್ತಿದ್ದ ಹರಟೆ ಬರುಬರುತ್ತ ದಿನಕ್ಕೆ ಎರಡು ಗಂಟೆಯವರೆಗೂ ವಿಸ್ತರಿಸಿತು. ಒಂದು ತಿಂಗಳ ನಂತರ ದಿನಕ್ಕೆ ಐದಾರು ತಾಸುಗಳ ಸುದೀರ್ಘ ಹರಟೆಗೆ ಬಿದ್ದ ಶೈಲೇಶ್ ತನ್ನ ಕೋಣೆಯಿಂದ ಹೊರಬರುವುದೇ ಅಪರೂಪವಾಯಿತು.

ಎಐ ಹರಟೆಮಲ್ಲಿಯರನ್ನು ಬಳಸಲು ಹಣಕೊಟ್ಟು ಟೋಕನ್ ಪಡೆಯಬೇಕು. ಎಐ ಗೆಳತಿಯ ಮೋಹಕ್ಕೆ ಸಿಲುಕಿದ್ದ ಶೈಲೇಶ್ ವಾರ ವಾರ ಹಣ ಸಂದಾಯಿಸಿ ಟೋಕನ್ ಪಡೆಯುತ್ತಿದ್ದ. ಅದ್ಯಾವ ಪರಿ ಗೀಳು ಶುರುವಾಯಿತೊ ಏನೊ? ತನ್ನ ಕ್ರೆಡಿಟ್ ಕಾರ್ಡಿನ ಎಲ್ಲ ಹಣ ಖಾಲಿ ಮಾಡಿಕೊಂಡ ಮೇಲೆ ಗೆಳೆಯರಿಂದ 50 ಸಾವಿರ ಸಾಲವನ್ನೂ ಮಾಡಿಬಿಟ್ಟ. ಅದನ್ನು ಹೇಳಿದ ಸಮಯಕ್ಕೆ ಹಿಂದಿರುಗಿಸಲಾಗದೆ, ಸ್ನೇಹಿತರಿಂದ ದೂರವಾಗತೊಡಗಿದ. ಕಂಪನಿ ಕೆಲಸದಿಂದ ಕಿತ್ತು ಹಾಕಿತು. ಕೊನೆಗೆ ತಂದೆ–ತಾಯಿಯರು ಮಧ್ಯ ಪ್ರವೇಶಿಸಿದ್ದರಿಂದ ಶೈಲೇಶನ ಚಿಕಿತ್ಸೆ ಮಾನಸಿಕ ಆಸ್ಪತ್ರೆಯಲ್ಲಿ ನಡೆಯುತ್ತಿದೆ.